ಕರ್ನಾಟಕ ಸರ್ಕಾರ

ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, ಸಂಪಿಗೆ ರಸ್ತೆ, 18ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು-12

ಸಂಖ್ಯೆ: ಪಪೂಶಿಇ/ಪರೀಕ್ಷೆ/ಜಿಲ್ಲಾಉನಿಸೂ/2012-13. ದಿನಾಂಕ:15-03-2013

## ಜ್ಞಾಪನೆ

ವಿಷಯ: 2013 ಮಾರ್ಚ್ ದ್ವಿತೀಯ ಪಿಯುಸಿ ಪರೀಕ್ಷೆಗಳು ಪ್ರಾರಂಭವಾಗುವ ಹಿಂದಿನ ದಿನಗಳಲ್ಲಿ ಕೈಗೊಳ್ಳಬೇಕಾದ ಮುನ್ನೆಚ್ಚರಿಕೆ ಕ್ರಮಗಳ ಬಗ್ಗೆ.

****

2012ರ ಮಾರ್ಚ್‌ನಲ್ಲಿ ನಡೆಸಿದ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಗಳ ಸಂದರ್ಭದಲ್ಲಿ ಪರೀಕ್ಷೆಯ ಹಿಂದಿನ ಒಂದೆರಡು ದಿನಗಳಲ್ಲಿ ವಿದ್ಯಾರ್ಥಿಗಳನ್ನು ಒಂದೆಡೆ ಕಾಲೇಜು ಅಥವಾ ಟ್ಯೂಷನ್ ಕೇಂದ್ರಗಳಲ್ಲಿ ಗುಂಪಾಗಿ ಸೇರಿಸಿ ತಡರಾತ್ರಿಯವರೆವಿಗೂ ಪ್ರಶ್ನೋತ್ತರ ಅಭ್ಯಾಸ ಮಾಡಿಸುತ್ತಿದ್ದುದು ನಿರ್ದೇಶನಾಲಯದ ಗಮನಕ್ಕೆ ಬಂದಿರುತ್ತದೆ. ಜೊತೆಗೆ ಕೆಲವು ಪ್ರಶ್ನೆಪತ್ರಿಕೆಗಳು ಪರೀಕ್ಷೆ ಹಿಂದಿನ ದಿನಗಳಲ್ಲಿ ಅಕ್ರಮವಾಗಿ ಕೆಲವು ವಿದ್ಯಾರ್ಥಿಗಳಿಗೆ ದೊರೆತ್ತಿದ್ದುದು ಸಹಾ ನಿರ್ದೇಶನಾಲಯದ ಗಮನಕ್ಕೆ ಬಂದಿರುತ್ತದೆ. ಇಂತಹ ಅಕ್ರಮ ಚಟುವಟಿಕೆಗಳನ್ನು ನಿರ್ದೇಶನಾಲಯ ಮತ್ತು ಸರ್ಕಾರ ಗಂಭೀರವಾಗಿ ಪರಿಗಣಿಸಿರುತ್ತದೆ ಅಲ್ಲದೆ ಈ ಸಂಬಂಧ ಪ್ರಶ್ನೆಪತ್ರಿಕೆಗಳು ಬಹಿರಂಗವಾಗಲು ಕಾರಣರಾದವರನ್ನು ಪತ್ತೆಮಾಡಿ ಅವರನ್ನು ದಸ್ತಗಿರಿಮಾಡಿ ಅವರ ವಿರುದ್ಧ ಸಿಓಡಿ ತನಿಖೆಯನ್ನು ಪ್ರಾರಂಭಿಸಿದ್ದು, ತನಿಖೆಯು ಪ್ರಗತಿಯ ಹಂತದಲ್ಲಿದೆ.

2013ರ ಮಾರ್ಚ್ ದ್ವಿತೀಯ ಪಿಯುಸಿ ಪರೀಕ್ಷೆಗಳನ್ನು ದಿನಾಂಕ 13-03-2013 ರಿಂದ ಪ್ರಾರಂಭಿಸಿ ನಡೆಸಲಾಗುತ್ತಿದೆ. ಈ ಪರೀಕ್ಷೆಗಳು ದಿನಾಂಕ 28-03-2013ರ ವರಗೆ ನಡೆಯುತ್ತವೆ. 2012ರ ಮಾರ್ಚ್‌ನಲ್ಲಿ ನಡೆಸಿದಂತಹ ಪರೀಕ್ಷೆಯಲ್ಲಿನ ಪರೀಕ್ಷಾ ಅಕ್ರಮಗಳು ಪುನರಾವರ್ತನೆಯಾಗದಂತೆ ಹೆಚ್ಚಿನ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳುವ ನಿಟ್ಟಿನಲ್ಲಿ ಇಲಾಖೆ ಅಗತ್ಯವಾದ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲು ನಿರ್ಧರಿಸಲಾಗಿದೆ.

.........2

1. ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಪದವಿ ಪೂರ್ವ ಶಿಕ್ಷಣ ಇಲಾಖೆಯ ಹಾಗೂ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕರು, ಕ್ಷೇತ್ರಶಿಕ್ಷಣಾಧಿಕಾರಿಗಳು ಕೂಡಲೇ ಸಭೆ ಸೇರಿ ಮುಂಜಾಗರೂಕತೆ ಕ್ರಮಗಳ ಬಗ್ಗೆ ಚರ್ಚಿಸುವುದು.

2. ಪ್ರತಿ ತಾಲ್ಲೂಕಿಗೆ ಕ್ಷೇತ್ರಶಿಕ್ಷಣಾಧಿಕಾರಿಗಳು ಹಾಗೂ ತಾಲ್ಲೂಕು ಜಾಗೃತದಳಗಳ ಅಧ್ಯಕ್ಷರು ಮತ್ತು ಸದಸ್ಯರುಗಳನ್ನು ಒಳಗೊಂಡಂತೆ ಕನಿಷ್ಠ ಎರಡು (2) ತಂಡಗಳನ್ನು ರಚಿಸುವುದು. ಪ್ರತಿ ತಂಡಕ್ಕೆ ಒಂದು ವಾಹನ/ಟ್ಯಾಕ್ಸಿ, ವಿಡಿಯೋಗ್ರಾಫರ್ ಮತ್ತು ಸ್ಥಳೀಯ ಪೊಲೀಸ್ ಸಿಬ್ಬಂದಿಯ ನೆರವಿನೊಂದಿಗೆ ವ್ಯವಸ್ಥೆಮಾಡಿಕೊಂಡು ತಡರಾತ್ರಿಯವರೆವಿಗೂ ಸ್ಥಳೀಯ ಶಾಲಾ-ಕಾಲೇಜುಗಳು ಮತ್ತು ಟ್ಯೂಷನ್ ಕೇಂದ್ರಗಳ ಸುತ್ತ ಗಸ್ತು ತಿರುಗುವುದು.

3. ತಂಡಗಳು ಪರೀಕ್ಷೆಯ ಹಿಂದಿನ ದಿನಗಳಲ್ಲಿ ಸಂಜೆಯಿಂದ ಮಧ್ಯರಾತ್ರಿಯವರೆವಿಗೂ ಗಸ್ತು ತಿರುಗುವುದು. ಗಸ್ತು ತಿರುಗುವ ಸಂದರ್ಭದಲ್ಲಿ ಈ ಕೆಳಗಿನ ಅಂಶಗಳನ್ನು ತಪ್ಪದೇ ಪಾಲಿಸುವುದು.

ಅ) ವಿದ್ಯಾರ್ಥಿಗಳು ಗುಂಪುಗುಂಪಾಗಿ ಒಂದೆಡೆ ಸೇರಿ ಅನುಮಾನಸ್ಪದವಾಗಿ ಪ್ರಶ್ನೋತ್ತರಗಳ ಬಗ್ಗೆ ಚರ್ಚಿಸುವುದು, ಗುಂಪಾಗಿ ಒಂದೆಡೆಯಿಂದ ಮತ್ತೊಂದೆಡೆಗೆ ಅನುಮಾನಸ್ಪದವಾಗಿ ಓಡಾಡುವುದು ಕಂಡುಬಂದಲ್ಲಿ ಅಂತಹವರ ನಡವಳಿಕೆಗಳ ಬಗ್ಗೆ ನಿಗಾವಹಿಸಿಸುವುದರ ಜೊತೆಗೆ ಸಂಶಯ ಕಂಡುಬಂದಲ್ಲಿ ಸ್ಥಳೀಯ ಪೊಲೀಸ್ ಠಾಣೆಗೆ ದೂರುದಾಖಲಿಸುವುದು.

ಆ) ಸ್ಥಳೀಯ ಸೈಬರ್ ಕೆಫೆ/ಜೆರಾಕ್ಸ್ ಅಂಗಡಿಗಳ ಮೇಲೆ ಸೂಕ್ಷ್ಮವಾಗಿ ನಿಗಾವಹಿಸುವುದು.

ಇ) ಸ್ಥಳೀಯ ಶಾಲಾ-ಕಾಲೇಜುಗಳ ಉಪನ್ಯಾಸಕರು ವಿದ್ಯಾರ್ಥಿಗಳಿಗೆ ಪ್ರಶ್ನೋತ್ತರ ಅಭ್ಯಾಸ ನೀಡುತ್ತಿರುವುದು ಕಂಡುಬಂದಲ್ಲಿ ಅಂತಹ ಪ್ರಶ್ನೆಪತ್ರಿಕೆಗಳ ದೃಢೀಕೃತ ಪ್ರತಿಗಳನ್ನು ಪಡೆದುಕೊಳ್ಳುವುದು.

.............3

ಈ) ಪರೀಕ್ಷಾ ಕಾರ್ಯಗಳಿಗೆ ನಿಯೋಜಿತಗೊಂಡ ಕೊಠಡಿ ಮೇಲ್ವಿಚಾರಕರು ಮತ್ತು ಕಾಲೇಜು ಸಿಬ್ಬಂದಿ ಪರೀಕ್ಷಾ ಅವ್ಯವಹಾರಗಳಿಗೆ ಪ್ರೋತ್ಸಾಹಿಸುತ್ತಿರುವುದು ಕಂಡುಬಂದಲ್ಲಿ ಅಂತಹವರ ವಿವರಗಳನ್ನು ಪಡೆದು ಸ್ಥಳೀಯ ಪೊಲೀಸ್ ಠಾಣೆಗಳಿಗೆ ಮಾಹಿತಿನೀಡ್ಲುವುದು.

ಈ ಮೇಲೆ ತಿಳಿಸಿರುವ ಎಲ್ಲಾ ಮುನ್ನೆಚ್ಚರಿಕೆ ಕ್ರಮಗಳನ್ನು ಕಡ್ಡಾಯವಾಗಿ ಕೈಗೊಂಡು ತಂಡಗಳನ್ನು ರಚಿಸಿ ತಡರಾತ್ರಿಯವರೆವಿಗೂ ಗಸ್ತು ತಿರುಗುವುದು. ಈ ಕಾರ್ಯಗಳಿಗೆ ಅಗ್ಯತವಾಗಿ ಬೇಕಾಗುವ ಟ್ಯಾಕ್ಸಿಗಳನ್ನು ಬಾಡಿಗೆಗೆ ಪಡೆದು ಕಾರ್ಯನಿರ್ವಹಿಸುವುದು.

ಈ ವಾಹನಗಳಿಗೆ **ON GOVT. DUTY** ಲೇಬಲ್‌ನ್ನು ಅಂಟಿಸಿಕೊಂಡು ವಿಡಿಯೋಗ್ರಾಫರ್ ಜೊತೆಗೆ ಕಾರ್ಯನಿರ್ವಹಿಸುವುದು. ಈ ಕಾರ್ಯಗಳ ನಿರ್ವಹಣೆಯ ಸಂಪೂರ್ಣ ಜವಾಬ್ದಾರಿಯನ್ನು ಪದವಿ ಪೂರ್ವ ಶಿಕ್ಷಣ ಇಲಾಖೆಯ ಜಿಲ್ಲಾ ಉಪನಿರ್ದೇಶಕರಿಗೆ ವಹಿಸಲಾಗಿದೆ. ಇವರು ಆಯಾಜಿಲ್ಲಾ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕರೊಂದಿಗೆ ಸಮಾಲೋಚಿಸಿ ಸ್ಥಳೀಯ ಪೊಲೀಸ್ ಅಧಿಕಾರಿಗಳ ಮಾರ್ಗದರ್ಶನ ಪಡೆದು ಅವರ ನೆರವಿನೊಂದಿಗೆ ಕಾರ್ಯನಿರ್ವಹಿಸುವುದು.

ವಾಹನ ಮತ್ತು ವಿಡಿಯೋಗ್ರಾಫ್ ಬಾಡಿಗೆ ಬಾಬ್ತು ವೆಚ್ಚಗಳನ್ನು ಪದವಿ ಪೂರ್ವ ಶಿಕ್ಷಣ ಇಲಾಖೆಯ ನಿರ್ದೇಶನಾಲಯವು ಭರಿಸುತ್ತದೆ. ಈ ಮೇಲ್ಕಂಡ ಕ್ರಮಗಳನ್ನು ಕಟ್ಟುನಿಟ್ಟಾಗಿ ಕೈಗೊಂಡ ಬಗ್ಗೆ ಸಮಗ್ರವರದಿಯನ್ನು ಪದವಿ ಪೂರ್ವ ಶಿಕ್ಷಣ ಇಲಾಖೆಯ ಜಿಲ್ಲಾ ಉಪನಿರ್ದೇಶಕರು ತಯಾರಿಸಿ ಮೂಲಬಿಲ್ಲುಗಳೊಂದಿಗೆ ಪರೀಕ್ಷೆಗಳು ಮುಗಿದ ನಂತರ ನಿರ್ದೇಶನಾಲಯಕ್ಕೆ ಸಲ್ಲಿಸುವುದು.

.......4

ಪ್ರತಿ ತಂಡದ ತಪಾಸಣಾ ವರದಿಗಳು ಹಾಗೂ ವಿಡಿಯೋ ಚಿತ್ರಿಕರಣದ ಮೂಲ ಸಿಡಿಗಳನ್ನು (**unedited**) ಈ ಕೆಳಕಂಡ ತಂಡದವರಿಗೆ ಪರಿಶೀಲನೆಗೆ ಹಾಗೂ ಮುಂದಿನ ಕ್ರಮಕ್ಕಾಗಿ ಕಡ್ಡಾಯವಾಗಿ ಸಲ್ಲಿಸುವುದು.

1) ಶ್ರೀ ಸಿ.ಡಿ.ರಾಜೇಗೌಡ, ಸಹಾಯಕ ನಿರ್ದೇಶಕರು, ಪಪೂಶಿಇ.
2) ಶ್ರೀ ಹೊನ್ನಯ್ಯ, ಸಹಾಯಕ ನಿರ್ದೇಶಕರು, ಪಪೂಶಿಇ.
3) ಶ್ರೀಮತಿ ಲಲಿತಾಕುಮಾರಿ, ಸಹಾಯಕ ನಿರ್ದೇಶಕರು, ಪಪೂಶಿಇ.
4) ಡಾ.ಕಟ್ಟಿ, ಶಾಖಾಧಿಕಾರಿಗಳು, ಪಪೂಶಿಇ.
5) ಶ್ರೀ ಶ್ರೀನಾಥ್, ಶಾಖಾಧಿಕಾರಿಗಳು, ಪಪೂಶಿಇ.
6) ಶ್ರೀ ಕುಮಾರ್, ಲೆಕ್ಕಪತ್ರ ಅಧೀಕ್ಷಕರು, ಪಪೂಶಿಇ.

ಒಟ್ಟಾರೆ ಯಾವುದೇ ರೀತಿಯ ಗೊಂದಲಗಳಿಗೆ ಅವಕಾಶವಾಗದಂತೆ ಪರೀಕ್ಷೆಗಳು ಸುಲಲಿತವಾಗಿ ನಡೆಯುವಂತಾಗಲು ಎಲ್ಲಾ ರೀತಿಯ ಮುನ್ನೆಚ್ಚರಿಕೆ ಕ್ರಮಗಳನ್ನು ಸಮರೋಪಾದಿಯಲ್ಲಿ ಕೈಗೊಳ್ಳಬೇಕೆಂದು ಈ ಮೂಲಕ ತಿಳಿಸಿದೆ.

ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ

ನಿರ್ದೇಶಕರು
ಪದವಿ ಪೂರ್ವಶಿಕ್ಷಣ ಇಲಾಖೆ

ಇವರಿಗೆ,

1 ಎಲ್ಲಾ ಜಿಲ್ಲೆಯ ಉಪನಿರ್ದೇಶಕರು ಪದವಿ ಪೂರ್ವ ಶಿಕ್ಷಣ ಇಲಾಖೆ.

2 ಎಲ್ಲಾ ಜಿಲ್ಲೆಯ ಉಪನಿರ್ದೇಶಕರು ಸಾರ್ವಜನಿಕ ಶಿಕ್ಷಣ ಇಲಾಖೆ.

ಪ್ರತಿಗಳು:

ಮಾನ್ಯ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.

# ಪದವಿ ಪೂರ್ವ ಶಿಕ್ಷಣ ಇಲಾಖೆ

18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-12.

## ದ್ವಿತೀಯ ಪಿಯುಸಿ ಪರೀಕ್ಷಾ ವಿಶೇಷ ಪ್ರಕಟಣೆ

ಪಪೂಶಿಇ/ಪರೀಕ್ಷೆ/ಜಿಲ್ಲಾಉನಿಸೂ/2012-13 ದಿನಾಂಕ: 15.03.2013

- ಮಾರ್ಚ್-2013ರ ದ್ವಿತೀಯ ಪಿಯುಸಿ ಪರೀಕ್ಷೆಗಳನ್ನು ಉತ್ತಮ ರೀತಿಯಲ್ಲಿ ನಡೆಸುವುದಕ್ಕಾಗಿ ಪದವಿ ಪೂರ್ವ ಶಿಕ್ಷಣ ಇಲಾಖೆಯು ಜಿಲ್ಲಾಧಿಕಾರಿಗಳು ಹಾಗೂ ಪೊಲೀಸ್ ವರಿಷ್ಠಾಧಿಕಾರಿಗಳ ನೇತೃತ್ವದಲ್ಲಿ ಹಲವಾರು ಕ್ರಮಗಳನ್ನು ಕೈಗೊಂಡಿದೆ.
- ವಿದ್ಯಾರ್ಥಿಗಳು ಪರೀಕ್ಷೆಗಳಿಗೆ ಸಂಬಂಧಿಸಿದಂತೆ ಹರಡಲ್ಪಡುವ ಸುಳ್ಳು ವದಂತಿಗಳಿಗೆ ಕಿವಿಗೊಡಬಾರದು.
- ಪರೀಕ್ಷೆಗಳನ್ನು ಉತ್ತಮ ಗುಣಮಟ್ಟದಲ್ಲಿ ನಡೆಸುವುದಕ್ಕಾಗಿ ಹಲವಾರು ಅಧಿಕಾರಿಗಳ ತಂಡಗಳನ್ನು ರಚಿಸಲಾಗಿದೆ. ಈ ತಂಡಗಳಿಗೆ ವಾಹನಗಳೊಂದಿಗೆ ಹಾಗೂ ವಿಡಿಯೋ ಸೌಲಭ್ಯಗಳೊಂದಿಗೆ ಸೂಕ್ಷ್ಮವೆಂದು ಗುರುತಿಸಲಾದ ಪರೀಕ್ಷಾ ಕೇಂದ್ರಗಳ ಆವರಣಗಳ ಸುತ್ತ-ಮುತ್ತ ಗಸ್ತು ತಿರುಗಲು ಆದೇಶಿಸಲಾಗಿದೆ. ಈ ತಂಡಗಳ ಅಧಿಕಾರಿಗಳಿಗೆ ಪರೀಕ್ಷೆಗೆ ಸಂಬಂಧಿಸಿದ ಕಾನೂನು ಬಾಹಿರ ಚಟುವಟಿಕೆಗಳ ಬಗ್ಗೆ ಸಂಶಯ ಬಂದಲ್ಲಿ ಸ್ಥಳೀಯ ಪೊಲೀಸ್ ಠಾಣೆಗಳಲ್ಲಿ ಎಫ್‌ಐಆರ್‌ಗಳನ್ನು ದಾಖಲಿಸಲು ಅಧಿಕಾರ ನೀಡಲಾಗಿದೆ.
- ಇದೇ ರೀತಿ ಜರಾಕ್ಸ್ ಮತ್ತು ಸೈಬರ್ / ಇ-ಮೇಲ್ ಕೇಂದ್ರಗಳ ಕಾರ್ಯ ಚಟುವಟಿಕೆಗಳ ಮೇಲೆ ಪರೀಕ್ಷಾ ಅವಧಿಯಲ್ಲಿ ನಿಗಾ ಇಡುವ ಅಧಿಕಾರವನ್ನು ಈ ತಂಡಗಳಿಗೆ ನೀಡಲಾಗಿದೆ.
- **ವದಂತಿ ಹರಡಲು ಬಳಸುವ ಎಲ್ಲಾ ರೀತಿಯ ಫ್ಯಾಕ್ಸ್‌ಗಳು, ಇ-ಮೇಲ್‌ಗಳು, ಮೊಬೈಲ್ ಇತ್ಯಾದಿಗಳ ಮೂಲಕ ವಿವರಗಳನ್ನು ಸ್ವೀಕರಿಸುವವರ ಹಾಗೂ ಕಳುಹಿಸುವವರ ಮೂಲವನ್ನು ಸರ್ಕಾರದಲ್ಲಿ ಲಭ್ಯವಿರುವ ತಂತ್ರಜ್ಞಾನದ ಮೂಲಕ ಸುಲಭವಾಗಿ ಪತ್ತೆ ಹಚ್ಚಲಾಗುವುದು.**
- **ವದಂತಿ ಹರಡುವವರ ಬಗ್ಗೆ ಸಾರ್ವಜನಿಕರ ಗಮನಕ್ಕೆ ಬಂದಲ್ಲಿ ಸಮೀಪದ ಪೊಲೀಸ್ ಠಾಣೆಗೆ/ಅಧಿಕಾರಿಗಳಿಗೆ ಕೂಡಲೇ ಮಾಹಿತಿ ನೀಡಿ ಸಹಕರಿಸಬೇಕಾಗಿ ಕೋರಿದೆ.**
- ಇಲಾಖೆಯ ಸಹಾಯವಾಣಿ ಸಂಖ್ಯೆ **080-23468740 / 23468741** ಇದರ ಸೌಲಭ್ಯವನ್ನು ಪಡೆದುಕೊಳ್ಳಬಹುದು.

ಚಕ್ರವರ್ತಿ ಮೋಹನ್, ಭಾ.ಆ.ಸೇ.,
ನಿರ್ದೇಶಕರು,
ಪದವಿ ಪೂರ್ವ ಶಿಕ್ಷಣ ಇಲಾಖೆ

# Pre-University Education Department

18th Cross Malleshwaram, Bangalore - 560 012.

## Second PUC Examination Special Publication

PUE/EXAM/DDPUE-INS/2012-13 Date: 15.03.2013

- The Pre-University Education Department has made elaborate arrangements for smooth conduct of the March-2013 II PUC Examinations under the aegis of the Deputy Commissioners & Superintendents of Police.
- Students should not believe or listen to rumours regarding examination.
- Several teams of officers have been set up for conduct of examinations in a good & qualitative manner. These teams have been provided with vehicles and video facilities and have been directed to constantly inspect areas around the examination centers particularly the centers considered to be sensitive. These teams have been authorised to file FIR's at local Police Station against those involved in examination related malpractices.
- The teams have been authorised to keep vigil on the activities of Xerox and e-mail Centers.
- **Origin & receipt of communication used for the purpose of spreading rumours using different media like fax, e-mail, mobiles can be easily traced by the Government using the available technology.**
- **The general public are requested to co-operate with the Authorities & inform the nearest local police stations / Authorities about rumour mongers at the earliest.**
- The Department Helplines : **080-23468740 / 23468741** may be accessed.

Chakravarthi Mohan, IAS
Director
PUE Department